ಗುಲ್ಬರ್ಗಾ ಜಿಲ್ಲೆಯಲ್ಲಿ ಮಿನಿ ಸಿಮೆಂಟ್ ಫ್ಯಾಕ್ಟರಿಗೆ ಅನುಮತಿ ನೀಡುವುದು

319 (114) ಶ್ರೀ ಬಿ.ಬಿ.ಶಿವಪ್ಪ (ಸಕಲೇಶಪುರ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಎಷ್ಟು ಮಿನಿ ಸಿಮೆಂಟ್ ಫ್ಯಾಕ್ಟರಿಗಳಿಗೆ ಯಾವಾಗ ಪರವಾನಾಗಿ ನೀಡಲಾಗಿದೆ

ಆ) ಈ ಫ್ಯಾಕ್ಟರಿಗಳಲ್ಲಿ ಎಷ್ಟು ಕಾರ್ಖಾನೆಗಳು ಸಿಮೆಂಟ್ ಉತ್ಪತ್ತಿ ಮಾಡುತ್ತಿವೆ

ಇ) ಸಿಮೆಂಟ್ ಉತ್ಪತ್ತಿ ಮಾಡದಿದ್ದಲ್ಲಿ ಕಾರಣಗಳೇನು?

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

ಅ) 14 ಮಿನಿ ಸಿಮೆಂಟ್ ಘಟಕಗಳಿಗೆ 1980, 1983ರ ಅವಧಿಯಲ್ಲಿ ಲೈಸನ್ಸ್ ನೀಡಲಾಗಿದೆ.

ಆ) ಯಾವ ಘಟಕವು ಉತ್ಪಾದನೆ ಮಾಡುತ್ತಿಲ್ಲ.

ಇ) ತಾಂತ್ರಿಕ ದೋಷದಿಂದ.

ಬಾಗೇಪಲ್ಲಿ ಕ್ಷೇತ್ರದಲ್ಲಿ ಕೈಗಾರಿಕಾನಗರವನ್ನು ಪ್ರಾರಂಭ ಮಾಡುವುದು

321 (565) ಶ್ರೀ ಸಂಪಂಗಿ ಎಸ್ (ಬಾಗೇಪಲ್ಲಿ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ಕ್ಷೇತ್ರದಲ್ಲಿ ಕೈಗಾರಿಕಾ ನಗರವನ್ನು ಪ್ರಾರಂಭ ಮಾಡಲು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕೈಗಾರಿಕಾ ನಗರ ನಿರ್ಮಾಣಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಆ) ಕೆ.ಎಸ್.ಎಸ್.ಐ.ಡಿ.ಸಿ.ಯಿಂದ ಕೈಗಾರಿಕಾ ಮಳಿಗೆಗಳನ್ನು ವಿತರಣೆ ಮಾಡುವುದರಲ್ಲಿ ಅವ್ಯವಹಾರ ನಡೆದಿದ್ದು ಮಾಡುವುದರಲ್ಲಿ ಅವ್ಯವಹಾರ ನಡೆದಿದ್ದು, ಅಧಿಕಾರಿಗಳು ಶಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3) 2000-01ರಲ್ಲಿ ಮಳಿಗೆಗಳನ್ನು ಯಾರು ಯಾರಿಗೆ ವಿತರಣೆ ಮಾಡಲಾಗಿದೆ (ವಿವರ ನೀಡುವುದು)?

ಶ್ರೀ ಎಸ್.ಆರ್ ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

ಅ) ಇಲ್ಲ, ಉದ್ಭವಿಸುವುದಿಲ್ಲ

ಆ) ಇಲ್ಲ

ಇ) ವಿವರವನ್ನು ಲಗತ್ತಿಸಿದೆ.